# ಅಂಚೆ ಮತ್ತು ತೆರಪಿನ ಶಿಕ್ಷಣ

# ದ್ವಿತೀಯ ಬಿ.ಎ. ಪದವಿ ಪರೀಕ್ಷೆ,

# ಆಗಸ್ಟ್/ ಸೆಪ್ಟೆಂಬರ್ 2010

## ಐಚ್ಛಿಕ ಕನ್ನಡ ಪತ್ರಿಕೆ - ಯುಕೆ - ೨

(ಹೊಸಬರಿಗೆ)

**ನಡುಗನ್ನಡ ಮತ್ತು ಹೊಸಗನ್ನಡ ಪಠ್ಯಗಳು**

**(ಪಠ್ಯಗಳು : ಹರಿಶ್ಚಂದ್ರ ಕಾವ್ಯ ಸಂಗ್ರಹ,**
**ಆಯ್ದ ಕುವೆಂಪು ಕವನಗಳು ಮತ್ತು ಗೆಲಿಲಿಯೊ ನಾಟಕ)**

ಅವಧಿ : *3* ಗಂಟೆಗಳು.] [ಅಂಕಗಳು: *80*

1. ಅ) ಒಂದರ ಭಾವಸ್ವಾರಸ್ಯವನ್ನು ವಿವರಿಸಿ. 6 ಅಂಕಗಳು

೧) ಕೋಣನೆರಡುಂ ಹೋರೆ ಗಿಡುವಿಂಗೆ ಮಿತ್ತೆಂಬ
ಕ್ಷೋಣಿಯಾಡುವ ಗಾದೆಯಂ ದಿಟಂ ಮಾಳ್ಪಂತೆ
ಹೂಣೆಸಿ ವಸಿಷ್ಠಂಗೆ ಕೌಶಿಕಂ ನುಡಿದ ಪ್ರತಿಜ್ಞೆಯಂ ಗೆಲುವಡಿನ್ನು |
ಜಾಣಿಂ ಹರಿಶ್ಚಂದ್ರರಾಯನುನ್ನತಿಯಳಿವ
ಕಾಣಬೇಕೆಂದಖಿಳ ಸಾಮರ್ಥ್ಯದ ಕಲಾಪ್ರ
ವೀಣನಂತಸ್ಥದೇಕಾಂತದೊಳ್ ಚಿಂತೆಯಿಂ ಭ್ರಾಂತಿಯೋಗದೊಳಿರ್ದನು ||

೨) ಆನಂದಮಯ ಈ ಜಗಹೃದಯ
ಏತಕೆ ಭಯ ಮಾಣೋ |
ಸೂರ್ಯೋದಯ ಚಂದ್ರೋದಯ
ದೇವರ ದಯೆ ಕಾಣೋ |

ಆ) ಎಂಟು ಪದಗಳಿಗೆ ಅರ್ಥ ಬರೆಯಿರಿ. $\frac{1}{2} \times 8 = 4$ ಅಂಕಗಳು

ಧಾತ್ರಿ, ಸುತನ, ಅಸು, ಸತ್ತಿಗೆ, ಶರಧಿ, ಬೈಗು, ನೇಹ, ಇನ, ರುಜೆ, ಪತಾಕೆ, ಉಲಿ, ಕಜ್ಜ

ಇ) ಎರಡಕ್ಕೆ ಟಿಪ್ಪಣಿ ಬರೆಯಿರಿ. $2\times2=4$ ಅಂಕಗಳು

೧) ಟಾಲೆಮಿ ಸಿದ್ಧಾಂತ ೨) ಬಹು ಸುವರ್ಣಯಾಗ ೩) ಜಡವಾದಿ

2. ನಾಲ್ಕಕ್ಕೆ ಸಂದರ್ಭ-ಸ್ವಾರಸ್ಯವನ್ನು ವಿವರಿಸಿ. $3\times4=12$ ಅಂಕಗಳು

೧) ಬಿಸುಡದಿರು ಬಿಸುಡದಿರು ಬೇಡಬೇಡಕಟಕಟ

೨) ಹೆತ್ತ ತಾಯಂ ಮಾರಿ ತೊತ್ತಕೊಂಬರೆ

೩) ಕೋಣನೆರಡುಂ ಹೋರೆ ಗಿಡುವಿಂಗೆ ಮಿತ್ತು

೪) ಎಲ್ಲಿಯೂ ನಿಲ್ಲದಿರು ಮನೆಯನೆಂದು ಕಟ್ಟದಿರು

೫) ತಿಳಿಯೆ ನೋವಿರೆ ತಿಳಿಯದಿರುವುದೆ ಜಾಣ್ಮೆ

೬) ಓ ನನ್ನ ಚೇತನ ಆಗು ನೀ ಅನಿಕೇತನ

ಮುಂದುವರೆದಿದೆ.... 2

೭) ವೈಚಾರಿಕತೆ ಗೆದ್ದಿತು ಎಂದರೆ ಏನರ್ಥ, ವಿಚಾರವಂತರು ಗೆದ್ದರು ಅಂತ

೮) ನನ್ನ ವಿಜ್ಞಾನಕ್ಕೆ ಜ್ಞಾನದ ದಾಹ ಇದೆ.

**3.** ಅ) ಯಾವುದಾದರೂ **ಒಂದು** ಪ್ರಶ್ನೆಗೆ ಉತ್ತರಿಸಿ. 10 ಅಂಕಗಳು

೧) ರಾಘವಾಂಕ ಕವಿ ಹರಿಶ್ಚಂದ್ರನ ರಾಜ್ಯ ತ್ಯಾಗವನ್ನು ಹೇಗೆ ಬಣ್ಣಿಸಿದ್ದಾನೆ ? ವಿವರಿಸಿ.

೨) ಸತ್ಯ ಮತ್ತು ಕುಲನಿಷ್ಠೆ ಹರಿಶ್ಚಂದ್ರ ಕಾವ್ಯದಲ್ಲಿ ನಿರೂಪಿತವಾಗಿರುವುದನ್ನು ಬಣ್ಣಿಸಿ.

ಆ) ಯಾವುದಾದರೂ **ಎರಡನ್ನು** ಕುರಿತು ಬರೆಯಿರಿ. $2\times4=8$ ಅಂಕಗಳು

೧) ಹರಿಶ್ಚಂದ್ರ ಕಾವ್ಯದಲ್ಲಿ ನಾಟಕೀಯ ಪ್ರಸಂಗಗಳು ?

೨) ವಸಿಷ್ಠ- ವಿಶ್ವಾಮಿತ್ರರ ಸಂವಾದವನ್ನು ಕುರಿತು ಬರೆಯಿರಿ.

೩) ಪುರಜನರ ಗೋಳಾಟ

**4.** ಅ) ಯಾವುದಾದರೂ **ಒಂದು** ಪ್ರಶ್ನೆಗೆ ಉತ್ತರಿಸಿ. 10 ಅಂಕಗಳು

೧) 'ಇಂದಿನ ದೇವರು' ಕವನದಲ್ಲಿ ಕವಿ ದೇವರನ್ನು ಹೇಗೆ ಕಂಡಿದ್ದಾನೆ ? ವಿವರಿಸಿ.

೨) 'ಒಬ್ಬ ತಾಯಿಗೆ' ಕವನದ ಸ್ವಾರಸ್ಯವನ್ನು ವಿವರಿಸಿ.

ಆ) ಯಾವುದಾದರೂ **ಎರಡಕ್ಕೆ** ಉತ್ತರಿಸಿ. $2\times4=8$ ಅಂಕಗಳು

೧) 'ಸರ್ವೋದಯ ತತ್ವ'ವು 'ಶ್ರೀ ಸಾಮಾನ್ಯನ ದೀಕ್ಷಾ ಗೀತೆ'ಯಲ್ಲಿ ಮೂಡಿದ ರೀತಿಯನ್ನು ಬರೆಯಿರಿ.

೨) ಕಲ್ಕಿ ಕವನದಲ್ಲಿ ಚಿತ್ರಿತವಾಗಿರುವ ಅಂಶಗಳನ್ನು ಕುರಿತು ಬರೆಯಿರಿ.

೩) 'ಶ್ರೀ ಸಾಮಾನ್ಯ' ಕವನದ ಆಶಯ

**5.** ಅ) ಯಾವುದಾದರೂ **ಒಂದು** ಪ್ರಶ್ನೆಗೆ ಉತ್ತರಿಸಿ. 10 ಅಂಕಗಳು

೧) ಗೆಲಿಲಿಯೋನ ವ್ಯಕ್ತಿತ್ವ ನಾಟಕದಲ್ಲಿ ಮೂಡಿ ಬಂದಿರುವ ಬಗೆಯನ್ನು ವಿವರಿಸಿ.

೨) ಗೆಲಿಲಿಯೋ ನಾಟಕದಲ್ಲಿ ಪ್ಲೇಗ್ ಪ್ರಸಂಗದ ಸಂದರ್ಭ ಕುರಿತು ಬರೆಯಿರಿ.

ಆ) ಯಾವುದಾದರೂ **ಎರಡಕ್ಕೆ** ಉತ್ತರಿಸಿ. $2\times4=8$ ಅಂಕಗಳು

೧) ಗೆಲಿಲಿಯೋನ ತಪ್ಪೊಪ್ಪಿಗೆಯು ನಾಟಕದಲ್ಲಿ ಮೂಡಿಬಂದ ಬಗೆ.

೨) ಆಂದ್ರಿಯಾ ಪಾತ್ರ ಕುರಿತು ಬರೆಯಿರಿ.

೩) ಗೆಲಿಲಿಯೋ- ಸ್ಯಾಗ್ರೆಡೋ ಸಂಭಾಷಣೆಯ ಸ್ವಾರಸ್ಯ.

* ** *